ಭಾರತದ ಸತ್ಯಾಸತ್ಯತೆಯ ಪರವಾಗಿ ಮಾತನಾಡುವ ಗಾಂಧಿಯವರು, ಅದನ್ನು ಒಳಗಿನಿಂದ ಮತ್ತು ಹೊರಗಿನಿಂದ ಸೆಣಸಲು ಅವಕಾಶ ಮಾಡಿ ಕೊಡುತ್ತಾರೆ. ಏಕೆಂದರೆ ಅವರು ಎಲ್ಲೆಡೆ ಜನರ ಸ್ವಯಂ-ವ್ಯಾಖ್ಯಾನಗಳಲ್ಲಿ ಮಧ್ಯಪ್ರವೇಶಿಸುವ ಹಕ್ಕನ್ನು ತಾವು ಹೊಂದಿರುವುದಾಗಿ ಭಾವಿಸುತ್ತಾರೆ. ಆದರೆ, ಅಂಬೇಡ್ಕರ್‌ರವರಿಗೆ ಈ ಸತ್ಯಾಸತ್ಯತೆಯ ಪರಿಕಲ್ಪನೆಯು ಹೆಜಿಮೊನಿಯಲ್ಲಿ ಆಳವಾಗಿ ಸಿಲುಕಿ ಕೊಂಡಿರಬಹುದೆನಿಸುತ್ತದೆ. ಹಾಗಾಗಿ, ಅದನ್ನು ದಾಟಿಕೊಂಡು ಹೋಗಲು ಇರಬಹುದಾದ ಏಕೈಕ ಮಾರ್ಗವೆಂದರೆ ಜನಾಳ್ವಿಕೆ ಮಾತ್ರ ಎಂದು ಸೂಚಿಸುತ್ತಾರೆ. ಗಾಂಧಿಯವರಿಗಿಂತ ಭಿನ್ನವಾಗಿ, ಆಧುನಿಕ ಸಮಾಜಗಳಲ್ಲಿ ಮಾನವ ಪ್ರಯತ್ನಕ್ಕೆ ಅಗತ್ಯವಿರುವ ಸುದೃಢ ಬಂಧಗಳನ್ನು ರಾಷ್ಟ್ರೀಯ ಸಮುದಾಯದಿಂದ ಮಾತ್ರ ವಿಸ್ತರಿಸಬಹುದು ಎಂದು ಅಂಬೇಡ್ಕರ್ ಭಾವಿಸುತ್ತಾರೆ. ಸುದೃಢ ಬಂಧಗಳನ್ನು ಒಳಗೊಂಡಿರುವ ರಾಷ್ಟ್ರದ ಪರಿಕಲ್ಪನೆಗೆ ಗಾಂಧಿ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ ಎಂದು ನಾನು ಭಾವಿಸುವುದಿಲ್ಲ. ಅವರು ಸ್ವಾಯತ್ತ ಗ್ರಾಮ ಸಮುದಾಯಗಳನ್ನು ಆಧರಿಸಿದ, ಉನ್ನತ ವಲಯಗಳು ಕೆಳ ವಲಯಗಳಿಗೆ ಬಿಟ್ಟುಕೊಡಲಾಗದ ಕೆಲಸಗಳಿಗೆ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳುವಂತಹ, ರಾಜಕೀಯ ಸಮುದಾಯದ ಅನ್ವೇಷಣೆಯಲ್ಲಿದ್ದರು. ಸಾಮಾಜಿಕ ಮತ್ತು ಆರ್ಥಿಕ ಅಂಚಿನಲ್ಲಿರುವಿಕೆಗೆ ಸಂವೇದನಾಶೀಲರಾಗಿರುವುದರಿಂದ, ನಾನು ಅಂಬೇಡ್ಕರ್‌ರವರೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಂಡೆ. ಆದರೆ, ಅಂಬೇಡ್ಕರ್‌ರವರ ಯೋಜನೆಯಲ್ಲಿ ಗಾಂಧಿಯನ್ನು ನಿರ್ಣಾಯಕ ಉಪಸ್ಥಿತಿಯಾಗಿ ನೋಡಿದೆ. ಭಾರತದಾದ್ಯಂತ, ನಾನು ವಾಸಿಸುತ್ತಿದ್ದಾಗಲೆಲ್ಲ, ದಲಿತ ಕುಟುಂಬಗಳ ಸದಸ್ಯರನ್ನು ಕಂಡು ಮಾತನಾಡಿಸುತ್ತಿದ್ದಾಗಲೆಲ್ಲ, ಅವರೆಲ್ಲ ಅಂಬೇಡ್ಕರ್‌ರವರನ್ನು ತಮ್ಮ ವಿಮೋಚನಾ ಯೋಜನೆಯಲ್ಲಿ ಎಷ್ಟೇ ಮುಂಚೂಣಿಯಲ್ಲಿಟ್ಟು ನೋಡಿದರೂ, ಗಾಂಧಿಯವರನ್ನು ಇಂದಿಗೂ ಎತ್ತರದಲ್ಲಿರಿಸಿ ನೋಡಿದ್ದನ್ನು ಕಂಡಿದ್ದೇನೆ. ಆದರೆ ಅವರಿಬ್ಬರ ನಡುವೆ ದೋಷಾರೋಪಣೆಯನ್ನು ಎಳೆಯಲಾಗಿರುವುದು, ದುಸ್ತರ ಗೋಡೆಯನ್ನು ಕಟ್ಟಲಾಗಿರುವುದು ದಲಿತ ಕಾರ್ಯಕರ್ತರು ಹಾಗೂ ರಾಜಕೀಯ ನಾಯಕರ ಮಟ್ಟದಲ್ಲಿ ಮಾತ್ರ. ಹಾಗೆಯೇ, ನಾನು ಭೇಟಿಯಾಗಿರುವ ಹೆಚ್ಚಿನ ಗಾಂಧಿವಾದಿಗಳು ಕೂಡ ಅಂಬೇಡ್ಕರ್‌ರವರ ಬಗ್ಗೆ ಕಡಿಮೆ ಸೂಕ್ಷ್ಮತೆಯನ್ನು ತೋರಿದ್ದು, ಇಂದಿಗೂ ಅವರ ಮಹತ್ವವನ್ನು ಕಡಿಮೆ ಮಾಡಿಯೇ ಮಾತನಾಡುತ್ತಾರೆ.



**◆ ಧ್ರುವೀಕೃತ ಚರ್ಚೆಯ ಇಂದಿನ ವಾತಾವರಣದಲ್ಲಿ - ವಿಶೇಷವಾಗಿ ಭಾರತೀಯ ಭಾಷೆಗಳ ಸಾಮಾಜಿಕ ಮಾಧ್ಯಮದಲ್ಲಿ- ಅಂಬೇಡ್ಕರ್-ಗಾಂಧಿ ಚರ್ಚೆಯು ಯುವ ಪೀಳಿಗೆಯಲ್ಲಿ ಹೊಸ ತೀವ್ರತೆಯನ್ನು ಪಡೆದುಕೊಂಡಿದ್ದು, ಯಾರಾದರೂ ಅಂಬೇಡ್ಕರ್‌ವಾದಿಯಾಗಬೇಕೆಂದರೆ, ಅವರು ಗಾಂಧಿ ವಿರೋಧಿಯಾಗಿರಬೇಕು ಎಂಬ ಬೈನರಿ ಮಟ್ಟಕ್ಕೆ ಇಳಿದಿದೆ. ಈ ದ್ವಂದ್ವ ಅಕಡೆಮಿಕ್ ಚರ್ಚೆಗಳಲ್ಲಿಯೂ ಆಗಾಗ್ಗೆ ನುಸುಳುವುದುಂಟು. ದಶಕಗಳಿಂದ ಇಬ್ಬರೂ ವ್ಯಕ್ತಿಗಳೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಂಡಿರುವ ನೀವು ಈ ಬೆಳವಣಿಗೆಯನ್ನು ಹೇಗೆ ಗ್ರಹಿಸುತ್ತೀರಿ? ಈ ಚೌಕಟ್ಟು ಚರ್ಚೆಯನ್ನು ಆಳಗೊಳಿಸುತ್ತದೆಯೇ ಅಥವಾ ಅವುಗಳ ಸಂಕೀರ್ಣ ಬೌದ್ಧಿಕ ಮತ್ತು ರಾಜಕೀಯ ಪರಂಪರೆಯನ್ನು ಗ್ರಹಿಸುವುದಕ್ಕೆ ಅಗತ್ಯವಾಗಿರುವ ಸೂಕ್ಷ್ಮ ತಿಳಿವಳಿಕೆಯನ್ನು ತುಂಬ ಸರಳಗೊಳಿಸುತ್ತದೆಯೇ? ಆ ದೃಷ್ಟಿಯಿಂದ ಇಪ್ಪತ್ತನೇ ಶತಮಾನವನ್ನು 'ಗಾಂಧಿ ಯುಗ' ಮತ್ತು ಇಪ್ಪತ್ತೊಂದನೇ ಶತಮಾನವನ್ನು 'ಅಂಬೇಡ್ಕರ್ ಯುಗ' ಎಂದು ಕರೆಯುವುದು ನಿಮ್ಮ ದೃಷ್ಟಿಕೋನದೊಂದಿಗೆ ಅನುರಣಿಸುತ್ತದೆಯೇ?**